सत्यमेव जयते
कृषि एवं किसान
कल्याण मंत्रालय
MINISTRY OF
AGRICULTURE AND
FARMERS WELFARE

सत्यमेव जयते
ग्रामीण विकास मंत्रालय
भारत सरकार
MINISTRY OF RURAL
DEVELOPMENT
GOVERNMENT OF INDIA

# ನೈಸರ್ಗಿಕ ಕೃಷಿ ಪರಿಕರಗಳು




**ರಾಷ್ಟ್ರೀಯ ಸಾವಯವ ಮತ್ತು ನೈಸರ್ಗಿಕ ಕೃಷಿ ಕೇಂದ್ರ**

ಹಾಪುರ್ ರಸ್ತೆ, ಕಮಲಾ ನೆಹರು ನಗರ, ಗಾಜಿಯಾಬಾದ್-2

0120-2764212, 2764906; ಫ್ಯಾಕ್ಸ್ 0120-2764901

ಇಮೇಲ್: nbdc@nic.in

## ಬೀಜಾಮೃತ

**ಬೇಕಾಗುವ ಸಾಮಗ್ರಿಗಳು:**




- ನೀರು– 20 ಲೀಟರ್
- ಸಗಣಿ–5 ಕೆ.ಜಿ
- ಗೋಮೂತ್ರ–5 ಲೀಟರ್
- ಸುಣ್ಣ–50 ಗ್ರಾಂ
- ಬೇರು ವಲಯ(ರೈಜೋಸ್ಫಿರಿಕ್) ಮಣ್ಣು –ಒಂದು ಬೊಗಸೆ

**ತಯಾರಿಸುವ ವಿಧಾನ**

- 5 ಕೆಜಿ ದೇಸಿ ಹಸುವಿನ ಸಗಣಿ ತೆಗೆದುಕೊಂಡು ಅದನ್ನು ಹತ್ತಿ ಬಟ್ಟೆಯಲ್ಲಿ ಸುತ್ತಿಕೊಳ್ಳಿ.
- ಒಂದು ಬಕೆಟ್‌ನಲ್ಲಿ 20 ಲೀಟರ್ ನೀರನ್ನು ತೆಗೆದುಕೊಂಡು ಅದರಲ್ಲಿ ಮೇಲೆ ತಿಳಿಸಿದ ಹಾಗೆ ಬಟ್ಟೆಯಲ್ಲಿ ಸುತ್ತಿಟ್ಟ 5 ಕೆಜಿ ಹಸುವಿನ ಸಗಣಿಯನ್ನು ಅದ್ದಿಡಿ.
- 12 ರಿಂದ 16 ಗಂಟೆಗಳ ಕಾಲ ಅದನ್ನು ಹಾಗೆಯೆ ಬಿಡಿ ಇದರಿಂದ ಹಸುವಿನ ಸಗಣಿಯಲ್ಲಿನ ರಸ ನೀರಿನಲ್ಲಿ ಸೇರಿಕೊಳ್ಳಬಹುದು.
- ಮತ್ತೊಂದು ಪಾತ್ರೆಯಲ್ಲಿ 50 ಗ್ರಾಂ ಸುಣ್ಣವನ್ನು 1 ಲೀಟರ್ ನೀರಿನಲ್ಲಿ ಸೇರಿಸಿ ತಿಳಿ ಮಾಡಿ.
- ಈಗ ಮೇಲಿನ ಎರಡು ಸಿದ್ಧತೆಗಳನ್ನು ಸೇರಿಸಿ ಮಿಶ್ರಣ ಮಾಡಿ ಮತ್ತು ಅದಕ್ಕೆ 50 ಗ್ರಾಂ ರೈಜೋಸ್ಪಿರಿಕ್ ಮಣ್ಣನ್ನು ಸೇರಿಸಿ.
- ಅದರೊಳಗೆ 5 ಲೀಟರ್ ಗೋಮೂತ್ರ ಸೇರಿಸಿ ಮತ್ತು 8–12 ಗಂಟೆಗಳ ಕಾಲ ಈ ದ್ರಾವಣವನ್ನು ಹಾಗೆಯೇ ಬಿಡಿ.
- ಈಗ ಬೀಜಾಮೃತವು ಬೀಜೋಪಚಾರಕ್ಕೆ ಸಿದ್ಧವಾಗಿದೆ.

**ಬಳಸುವ ವಿಧಾನ?**

- ಯಾವುದೇ ಬೆಳೆಗಳ ಭಿತ್ತನೆ ಬೀಜಗಳಿಗೆ ಬೀಜಾಮೃತವನ್ನು ಸೇರಿಸಿ; ಅವುಗಳನ್ನು ಬೀಜದ ಮೇಲ್ಮೈಗೆ ಅಂಟಿಸಿ, ಕೈಯಿಂದ ಮಿಶ್ರಣ ಮಾಡಿ;
- ಅವುಗಳನ್ನು ನೆರಳಿನಲ್ಲಿ ಚೆನ್ನಾಗಿ ಒಣಗಿಸಿ ಮತ್ತು ಬಿತ್ತನೆಗಾಗಿ ಬಳಸಬಹುದು. ತೆಳು ಪದರನ್ನು ಹೊಂದಿರುವ ದ್ವಿದಳ ಧಾನ್ಯಗಳನ್ನು, ತ್ವರಿತವಾಗಿ ಅದ್ದಿ ಮತ್ತು ಒಣಗಲು ಬಿಡಿ.



**ಪ್ರಯೋಜನಗಳು**

- ಬಿತ್ತನೆ ಬೀಜಗಳ ಕಾರ್ಯಸಾಧ್ಯತೆಯನ್ನು ಹೆಚ್ಚಿಸುತ್ತದೆ
- ಬೀಜದಿಂದ ಬರುವ ರೋಗಗಳನ್ನು ತಡೆಯುತ್ತದೆ.

## ಜೀವಾಮೃತ

**ಬೇಕಾಗುವ ಸಾಮಗ್ರಿಗಳು:**

- ನೀರು – 200 ಲೀಟರ್
- ಸಗಣಿ – 10 ಕೆಜಿ
- ಗೋಮೂತ್ರ – 10 ಲೀಟರ್
- ಬೆಲ್ಲ – 2 ಕೆಜಿ
- ದ್ವಿಧಳ ಧಾನ್ಯದ ಪುಡಿ – 2 ಕೆಜಿ
- ಬೇರು ವಲಯ(ರೈಜೋಸ್ಫಿರಿಕ್) ಮಣ್ಣು – ಒಂದು ಬೊಗಸೆ




**ತಯಾರಿಸುವ ವಿಧಾನ**

- ಒಂದು ಎಕರೆ ಕೃಷಿ ಭೂಮಿಗೆ ಜೀವಾಮೃತವನ್ನು ತಯಾರಿಸಲು 200 ಲೀಟರ್ ನೀರನ್ನು ಒಂದು ಬ್ಯಾರೆಲ್ನಲ್ಲಿ ತೆಗೆದುಕೊಳ್ಳಿ.
- ಮೇಲಿನ ನೀರು ತುಂಬಿದ ಬ್ಯಾರೆಲ್‌ನಲ್ಲಿ 10 ಲೀಟರ್ ಗೋಮೂತ್ರವನ್ನು ಸೇರಿಸಿ. (ನಾಟಿ ಹಸುವಿನ ಗೋಮೂತ್ರವನ್ನು ಬಳಸಿದರೆ ಒಳ್ಳೆಯದು)
- ನಂತರ 10 ಕೆಜಿ ಗೋಮೂತ್ರವನ್ನು ಸೇರಿಸಿ.
- ಮೇಲಿನ ದ್ರಾವಣಕ್ಕೆ 2 ಕೆಜಿ ಬೆಲ್ಲದ ಪುಡಿ ಮತ್ತು 2 ಕೆಜಿ ದ್ವಿಧಳ ಧಾನ್ಯದ ಹಿಟ್ಟನ್ನು ಸೇರಿಸಿ.
- ನಂತರ ಒಂದು ಬೊಗಸೆ ರೈಜೋಸ್ಪಿರಿಕ್ ಮಣ್ಣನ್ನು ಸೇರಿಸಿ.
- ಮರದ ಕೋಲಿನಿಂದ ಪ್ರದಕ್ಷಿಣಾಕಾರವಾಗಿ ತಿರುಗಿಸುವ ಮೂಲಕ ಮೇಲಿನ ಎಲ್ಲಾ ಪದಾರ್ಥಗಳನ್ನು ಚೆನ್ನಾಗಿ ಮಿಶ್ರಣ ಮಾಡಿ.
- ನಂತರ ಬ್ಯಾರೆಲ್ ಅನ್ನು ಸೆಣಬಿನ ಚೀಲದಿಂದ ಮುಚ್ಚಿಡಿ.
- ಈ ಮೇಲಿನ ದ್ರಾವಣವನ್ನು ೪೮ ಗಂಟೆಗಳ ತನಕ ಹುದುವಿಕೆಗಾಗಿ(ಫರ್ಮಂಟೇಷನ್) ನೆರಳಿನಲ್ಲಿ ಇರಿಸಿ.

**ಬಳಸುವುದು ಹೇಗೆ?**

ಅ. ನೀರಿನಲ್ಲಿ ಮಿಶ್ರಣ ಮಾಡಿ ಸಿಂಪಡಿಸಿ

ಬ. ನೀರಾವರಿ ಮುಖಾಂತರ ನೀರಿನ ಜೊತೆಗೆ ಬಿಡುವುದು



**ಪ್ರಯೋಜನಗಳು**

- ಬೆಳವಣಿಗೆ ಮತ್ತು ಹೂಬಿಡುವಿಕೆಯನ್ನು ಉತ್ತೇಜಿಸುವುದರ ಜೊತೆಗೆ ಇಳುವರಿ ವರ್ಧಕವಾಗಿಯು ಕಾರ್ಯನಿರ್ವಹಿಸುತ್ತದೆ(@5–10%, ನೀರಿನೊಂದಿಗೆ ಬೆರೆಸಿ ಸಿಂಪಡಿಸಿ).
- ಮಣ್ಣಿನ ಫಲವತ್ತತೆ ಹೆಚ್ಚಿಸುತ್ತದೆ (ನೀರಾವರಿ ಮೂಲಕ ನೀರಿನ ಜೊತೆಗೆ ಹಾಯಿಸುವುದು)

# ಘನಜೀವಾಮೃತ

**ಬೇಕಾಗುವ ಸಾಮಗ್ರಿಗಳು:**

ಸಗಣಿ – 100 ಕೆಜಿ

ಗೋಮೂತ್ರ – 10 ಲೀ

ಬೆಲ್ಲ – 2 ಕೆಜಿ

ದ್ವಿಧಳ ಧಾನ್ಯದ ಪುಡಿ – 2 ಕೆಜಿ

ಬೇರು ವಲಯ(ರೈಜೋಸ್ಫಿರಿಕ್) ಮಣ್ಣು – ಒಂದು ಬೊಗಸೆ




**ಘನಜೀವಾಮೃತ ತಯಾರಿಸುವ ವಿಧಾನ**

- 100 ಕೆಜಿ ಚೆನ್ನಾಗಿ ಒಣಗಿದ ಹಸುವಿನ ಸಗಣಿ ತೆಗೆದುಕೊಂಡು ತೆಳುವಾದ ಪದರದ ರೂಪದಲ್ಲಿ ನೆಲದ ಮೇಲೆ ಏಕರೂಪವಾಗಿ ಹರಡಿ. ಅದಕ್ಕೆ ಸ್ವಲ್ಪ ಪ್ರಮಾಣದ ಗೋಮೂತ್ರವನ್ನು ಸೇರಿಸಿ.
- ಹಸುವಿನ ಸಗಣಿ ಮೇಲೆ 1 ಕೆಜಿ ದ್ವಿಧಳ ಧಾನ್ಯದ ಹಿಟ್ಟನ್ನು ಸೇರಿಸಿ.
- 2 ಕೆಜಿ ಬೆಲ್ಲ ಸೇರಿಸಿ.
- ಒಂದು ಬೊಗಸೆ ರೈಜೋಸ್ಪಿರಿಕ್ ಮಣ್ಣನ್ನು ಸೇರಿಸಿ.
- ಮೇಲಿನ ಎಲ್ಲಾ ಪದಾರ್ಥಗಳನ್ನು ಚೆನ್ನಾಗಿ ಮಿಶ್ರಣ ಮಾಡಿ ಮತ್ತು ಉಂಡೆಗಳನ್ನು ಮಾಡಿ.
- ಅದನ್ನು ನೆರಳಿನಲ್ಲಿ ಒಣಗಲು ಬಿಡಿ.
- ಒಣಗಿದ ನಂತರ ಎಲ್ಲಾ ಉಂಡೆಗಳನ್ನು ಪುಡಿಮಾಡಿ ಸಂಗ್ರಹಿಸಿ.
- ಈ ಒಣಗಿದ ಘನಜೀವಾಮೃತವನ್ನು 6 ತಿಂಗಳವರೆಗೆ ಸಂಗ್ರಹಿಸಬಹುದು.

**ಬಳಸುವುದು ಹೇಗೆ?**

ಬಿತ್ತನೆ ಸಮಯದಲ್ಲಿ ಎಕರೆಗೆ 400 ಕೆ.ಜಿ ಒಣಗಿಸಿ ಪುಡಿ ಮಾಡಿದ ಘನಜೀವಾಮೃತ

**ಪ್ರಯೋಜನಗಳು**

ಘನಜೀವಾಮೃತ ಬಳಕೆಯಿಂದ ಮಣ್ಣಿನಲ್ಲಿ ಸೂಕ್ಷ್ಮಜೀವಿಯ ಚಟುವಟಿಕೆಯು ವೃದ್ಧಿಸುತ್ತದೆ, ಇದರಿಂದ ಭೂಮಿಯಲ್ಲಿನ ಸಾವಯವ ಅಂಶಗಳನ್ನು ವೇಗವಾಗಿ ಕೊಳೆಸುವ ಮೂಲಕ ಬೆಳೆಗಳಿಗೆ ಪೋಷಕಾಂಶಗಳ ಲಭ್ಯತೆಯನ್ನು ಹೆಚ್ಚಿಸುತ್ತದೆ.



# ನೀಮಾಸ್ತ್ರ




**ಬೇಕಾಗುವ ಸಾಮಗ್ರಿಗಳು:**

ಬೇವಿನ ಎಲೆಗಳು – 5 ಕೆಜಿ

ಗೋಮೂತ್ರ – 5 ಲೀಟರ್

ಸಗಣಿ – 1 ಕೆಜಿ

ನೀರು – 100 ಲೀಟರ್

**ತಯಾರಿಸುವ ವಿಧಾನ**

- ಐದು ಕೆಜಿ ಬೇವಿನ ಹಸಿರು ಎಲೆ ಅಥವಾ ಐದು ಕೆಜಿ ಬೇವಿನ ಒಣಹಣ್ಣುಗಳನ್ನು ತೆಗೆದುಕೊಂಡು ರುಬ್ಬಿ ಚಟ್ನಿ ಮಾಡಿ ಇಟ್ಟುಕೊಳ್ಳಿ.
- ಬೇವಿನ ಎಲೆ ಅಥವಾ ಹಣ್ಣಿನ ಚಟ್ನಿಯನ್ನು 100 ಲೀಟರ್ ನೀರಿನಲ್ಲಿ ಸೇರಿಸಿ.
- ಅದರಲ್ಲಿ 5 ಲೀಟರ್ ಗೋಮೂತ್ರ ಹಾಗೂ ಒಂದು ಕೆ.ಜಿ ಗೋಮೂತ್ರ ಹಾಕಿ ಬೆರೆಸಿ.
- ಕೋಲಿನಿಂದ ತಿರುಗಿಸಿ ಬೆರೆಸಿ 72 ಗಂಟೆಗಳ ಕಾಲ ಮುಚ್ಚಿಡಿ.
- ದಿನಕ್ಕೆ ಮೂರು ಬಾರಿ ಪ್ರದಕ್ಷಿಣಾಕಾರವಾಗಿ ಕೋಲಿನಿಂದ ತಿರುಗಿಸಿ ಮತ್ತು 72 ಗಂಟೆಗಳ ನಂತರ ದ್ರಾವಣವನ್ನು ಹತ್ತಿ ಬಟ್ಟೆಯಿಂದ ಸೋಸಿ ಸಂಗ್ರಹಿಸಿಡಬಹುದು.

**ಬಳಸುವುದು ಹೇಗೆ?**

- ನೀಮಾಸ್ತ್ರವನ್ನು 6 ತಿಂಗಳ ತನಕ ಸಂಗ್ರಹಿಸಿ ಬಳಸಬಹುದು
- ನೀಮಾಸ್ತ್ರವನ್ನು ನೀರು ಬೆರೆಸದೆ 1 ಎಕರೆಗೆ 200 ಲೀಟರ್ ನಂತೆ ಸಿಂಪಡಿಸಿರಿ.

**ಉಪಯೋಗಗಳು**

- ರಸ ಹೀರುವ ಕೀಟಗಳು ಮತ್ತು ಸಣ್ಣ ಮರಿಹುಳುಗಳ ನಿರ್ವಹಣೆಗಾಗಿ.



# ಬ್ರಹ್ಮಾಸ್ತ್ರ




**ಬೇಕಾಗುವ ಸಾಮಗ್ರಿಗಳು:**

| | |
|---|---|
| • ಬೇವಿನ ಎಲೆಗಳು – 5 ಕಿ.ಗ್ರಾಂ. | • ಲಕ್ಕಿ ಗಿಡ– 2 ಕಿ.ಗ್ರಾಂ |
| • ಹೊಂಗೆ ಎಲೆಗಳು – 2 ಕಿ.ಗ್ರಾಂ. | • ದಾಳಿಂಬೆ ಎಲೆ– 2 ಕಿ.ಗ್ರಾಂ |
| • ಸೀತಾಫಲದ ಎಲೆಗಳು – 2 ಕಿ.ಗ್ರಾಂ. | • ಪಾರ್ಥೇನಿಯಂ ಎಲೆ– 2 ಕಿ.ಗ್ರಾಂ |
| • ಸೀಬೆ ಎಲೆಗಳು – 2 ಕಿ.ಗ್ರಾಂ. | • ಲಾಂಟನ ಎಲೆ(ಚದುರಂಗಿ)–2 ಕಿ.ಗ್ರಾಂ |
| • ಹರಳು/ಔಡಲ ಎಲೆಗಳು– 2 ಕಿ.ಗ್ರಾಂ | • ಹಾಗಲಕಾಯಿ ಎಲೆ–2 ಕಿ.ಗ್ರಾಂ |
| • ಹಸುವಿನ ಗಂಜಲ – 20 ಲೀ. | • ದತ್ತೂರ ಎಲೆ(ಮದರಂಗಿ ಗಿಡ)–2 ಕಿ.ಗ್ರಾಂ |

**ತಯಾರಿಕೆ ವಿಧಾನ:**

- ಹತ್ತು ಲೀಟರ್ ಹಸಿವಿನ ಗಂಜಲವನ್ನು ಒಂದು ಡ್ರಂನಲ್ಲಿ ತೆಗೆದುಕೊಳ್ಳಿ
- 5 ಕಿ.ಗ್ರಾಂ. ಚೆನ್ನಾಗಿ ಅರೆದ ಹಸಿ ಬೇವಿನ ಎಲೆಗಳನ್ನು ಹಾಕಿ
- 2 ಕಿ.ಗ್ರಾಂ. ಚೆನ್ನಾಗಿ ಅರೆದ ಕಾರಂಜ ಎಲೆಗಳನ್ನು ಹಾಕಿ
- 2 ಕಿ.ಗ್ರಾಂ. ಚೆನ್ನಾಗಿ ಅರೆದ ಸೀತಾಫಲದ ಎಲೆಗಳನ್ನು ಹಾಕಿ
- 2 ಕಿ.ಗ್ರಾಂ. ಚೆನ್ನಾಗಿ ಅರೆದ ಪಪ್ಪಾಯ ಎಲೆಗಳನ್ನು ಹಾಕಿ
- 2 ಕಿ.ಗ್ರಾಂ. ಚೆನ್ನಾಗಿ ಅರೆದ ಸೀಬೆ ಎಲೆಗಳನ್ನು ಹಾಕಿ
- ಈ ಎಲ್ಲವನ್ನು ಹತ್ತು ಲೀಟರ್ ಹಸಿವಿನ ಗಂಜಲದಲ್ಲಿ ಮಿಶ್ರಣ ಮಾಡಿ, ಚೆನ್ನಾಗಿ ಕರಗಿಸಿ, ಕುದಿಸಿ
- ಚೆನ್ನಾಗಿ 3–4 ಬಾರಿ ಕುದಿಸಿದ ನಂತರ ಬೆಂಕಿಯಿAದ ಕೆಳಗಡೆ ಇಳಿಸಿ
- ೪೮ ಗಂಟೆಗಳ ಕಾಲ ಮಿಶ್ರಣವನ್ನು ತಣ್ಣಗಾಗಲು ಬಿಡಿ. ನಂತರ ಬಟ್ಟೆಯನ್ನು ತೆಗೆದುಕೊಂಡು ಈ ಮಿಶ್ರಣವನ್ನು ಸೋಸಿ
- ಈಗ ದ್ರಾವಣ ಸಿಂಪರಣೆಗೆ ಸಿದ್ದವಾಗಿದೆ.

**ಬಳಸುವ ವಿಧಾನ:**

ಶೇ. 2–3% ದ್ರಾವಣವನ್ನು ನೀರಿನೊಂದಿಗೆ ಮಿಶ್ರಣ ಮಾಡಿ ಸಿಂಪಡಿಸಿ

**ಉಪಯೋಗಗಳು:**

ರಸಹೀರುವ ಕೀಟಗಳು, ಕಾಯಿ / ಹಣ್ಣು ಕೊರಕಗಳ ನಿರ್ವಹಣೆಗಾಗಿ ಬಳಸಬಹುದು.



# ಅಗ್ನಿ ಅಸ್ತ್ರ




**ತಯಾರಿಕೆಗೆ ಬೇಕಾಗುವ ಸಾಮಗ್ರಿಗಳು:**

- ಬೇವಿನ ಎಲೆಗಳು – 5 ಕಿ.ಗ್ರಾಂ.
- ಹಸಿರು ಮೆಣಸಿನಕಾಯಿ – 0.5 ಕಿ.ಗ್ರಾಂ.
- ಬೆಳ್ಳುಳ್ಳಿ – 0.5 ಕಿ.ಗ್ರಾಂ.
- ಹಸುವಿನ ಗಂಜಲ – 20 ಲೀಟರ್

**ತಯಾರಿಸುವ ವಿಧಾನ:**

- 20 ಲೀಟರ್ ಹಸುವಿನ ಗಂಜಲ ತೆಗೆದುಕೊಳ್ಳಿ
- 5 ಕಿ.ಗ್ರಾಂ. ಅರೆದ ಬೇವಿನ ಹಸಿರು ಎಲೆಗಳನ್ನು ಹಾಕಿ
- 0.5 ಕಿ.ಗ್ರಾಂ. ಅರೆದ ಹಸಿರು ಮೆಣಸಿನಕಾಯಿ ಹಾಕಿ
- 0.5 ಕಿ.ಗ್ರಾಂ. ಬೆಳ್ಳುಳ್ಳಿ ಹಾಕಿ
- ಈಗ ಈ ಎಲ್ಲ ಮಿಶ್ರಣವನ್ನು ಹಸುವಿನ ಗಂಜಲದಲ್ಲಿ ಕರಗಿಸಿ ಚೆನ್ನಾಗಿ ಕುದಿಸಿ
- 2–4 ಬಾರಿ ಚೆನ್ನಾಗಿ ಕುದಿಸಿದ ನಂತರ ಕೆಳಗೆ ಇಳಿಸಿ
- ೪೮ ಗಂಟೆಗಳ ಕಾಲ ತಣ್ಣಗಾಗಲು ಬಿಡಿ, ನಂತರ ಒಳ್ಳೆಯ ಬಟ್ಟೆಯನ್ನು ಬಳಸಿ ಈ ದ್ರಾವಣವನ್ನು ಸೋಸಿ.
- ಈಗ ದ್ರಾವಣ ಸಿಂಪರಣೆಗೆ ಸಿದ್ಧವಾಗಿದೆ.

**ಬಳಸುವ ವಿಧಾನ:**

ಶೇ.2–3% ದ್ರಾವಣವನ್ನು ನೀರಿನೊಂದಿಗೆ ಬೆರಸಿ ಸಿಂಪಡಿಸ ಬೇಕು.

**ಉಪಯೋಗ:**

ಮರದ ಕಾಂಡಗಳಲ್ಲಿ, ಎಲೆ ತೊಟ್ಟುಗಳಲ್ಲಿ, ರೆಂಬೆ, ಕೊಂಬೆಗಳಲ್ಲಿ ಜೀವಿಸುವ ಕೀಟಗಳಿಗಾಗಿ, ಎಲ್ಲ ವಿಧದ ದೊಡ್ಡ ಕಾಯಿ ಕೊರಕಗಳಿಗಾಗಿ ಮತ್ತು ಕಂಬಳಿ ಹುಳು (ಚಿಟ್ಟೆಯ ಮರಿಹುಳು) ಗಳಿಗಾಗಿ



# ದಶಪರ್ಣಿ

**ತಯಾರಿಕೆಗೆ ಬೇಕಾಗುವ ಸಾಮಗ್ರಿಗಳು:**

ಬೇವಿನ ಸೊಪ್ಪು– 5 ಕೆ.ಜಿ.

ಲಕ್ಕಿ ಗಿಡ– 2 ಕೆಜಿ

ಈಶ್ವರಬಳ್ಳಿ ಎಲೆಗಳು– 2 ಕೆಜಿ,

ಪಪ್ಪಾಯಿ ಎಲೆಗಳು–2 ಕೆಜಿ,

ಅಮೃತ ಬಳ್ಳಿ ಎಲೆಗಳು –2 ಕೆಜಿ,

ಸೀತಾಫಲ ಎಲೆಗಳು– 2 ಕೆಜಿ,

ಹೊಂಗೆ ಎಲೆಗಳು– 2 ಕೆಜಿ,

ಹರಳು/ಔಡಲ ಎಲೆಗಳು– 2 ಕೆಜಿ,

ಕಣಗಲೆ ಎಲೆಗಳು– 2 ಕೆ.ಜಿ.

ಎಕ್ಕದ ಎಲೆಗಳು– 2 ಕೆಜಿ,

ಹಸಿರು ಮೆಣಸಿನಕಾಯಿ – 2 ಕೆಜಿ,

ಬೆಳ್ಳುಳ್ಳಿ –250 ಗ್ರಾಂ,

ಹಸುವಿನ ಸಗಣಿ– 3 ಕೆ.ಜಿ.

ಗೋಮೂತ್ರ –5 ಲೀಟರ್



ದಶಪರ್ಣಿ ಕಷಾಯ

**ತಯಾರಿಸುವ ವಿಧಾನ:**

- ೨೦೦ ಲೀಟರ್ ನೀರನ್ನು ತೆಗೆದುಕೊಳ್ಳಿ.
- ಇದಕ್ಕೆ ಮೇಲಿನ ಎಲ್ಲಾ ಪದಾರ್ಥಗಳನ್ನು ಸೇರಿಸಿ.
- ಒಂದು ತಿಂಗಳು ಹುದುಗಲು ಬಿಡಿ
- ತದನಂತರ ದ್ರಾವಣವನ್ನು ಬಟ್ಟೆಯಿಂದ ಸೋಸಿಡಿ.
- ಈಗ ಬೆಳೆಗೆ ಸಿಂಪಡಿಸಲು ದ್ರಾವಣವು ಸಿದ್ಧವಾಗಿದೆ.

**ಬಳಸುವ ವಿಧಾನ:**

- ಶೇ. 2–3% ದ್ರಾವಣವನ್ನು ನೀರಿನೊಂದಿಗೆ ಬೆರಸಿ ಸಿಂಪಡಿಸ ಬೇಕು.

**ಉಪಯೋಗಗಳು:**

- ರಸಹೀರುವ ಕೀಟಗಳು, ಕಂಬಳಿ ಹುಳುಗಳ ನಿರ್ವಹಣೆಗಾಗಿ ಬಳಸಬಹುದು.